# ಇಂದ್ರಿಯಂಗಳ ಸುಖವ ನೆಚ್ಚದಿರು ಕಂಡ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 60.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 354.
3. **Note:** This song is not available in the books of Shri Betageri Krishna Sharma and Shri Bengeri Huchha and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ಕಾಂಭೋಜ ತಾಳ: ಝಂಪೆ

ಇಂದ್ರಿಯಂಗಳ ಸುಖವ ನೆಚ್ಚದಿರು ಕಂಡ್ಯ
ಇಂದ್ರಾದಿ ಲೋಕವೆಲ್ಲವು ಕಾಲ ಕಂಡ್ಯ
ಎಂದಿನಂತಲ್ಲ ಈ ದೇಹ ಕಳೆ ಕಂಡ್ಯ
ಹಿಂದು ಮುಂದಣ ಗತಿಯ ಅರಿತಿಹುದು ಕಂಡ್ಯ || 1 ||

ಎಳೆ ತುಳಸಿ ವನಮಾಲೆ ಧರಿಸಿಕೊಳಬೇಕು
ಘಳಿಲನೇ ಹರಿಯ ಪೂಜಿಸುತಿರಲುಬೇಕು
ಕಳಕಳನೆ ಏಕಮನ ಕರಗುತಿರಬೇಕು
ನಳಿನನಾಭನ ಪಾದ ಪೊಗಳುತಿರಬೇಕು || 2 ||

ಹರಿಕೃಷ್ಣ ಶರಣೆನ್ನು ಅದು ನಿಮಗೆ ಲೇಸು
ಹರಿಕಥಾಮೃತವನ್ನ ಜಗದೊಳಗೆ ಸೂಸು
ಹರಿಭಕ್ತಿಯಿಲ್ಲದವರ ಸಂಗಕ್ಕೆ ಹೇಸು
ಹರಿಯ ಮರೆತರೆ ಮುಂದೆ ನರಕದೊಳಗ್ಲಾಸು || 3 ||

ದುರ್ಜನರ ಮನೆಯೊಳಿಹ ಹಾಲ ಸವಿಗಿಂತ
ಸಜ್ಜನರ ಮನೆಯೊಳಿಹ ನೀರು ಲೇಸೆಂದ
ದುರ್ಜನರ ಸಂಗದೆಡೆ ಕೂಡಿಯಾಟದಕಿಂತ
ಸಜ್ಜನರ ಕೂಡೆ ಕಾದಾಡುವುದೇ ಲೇಸೆಂದ || 4 ||

ಹರಿಯನೇ ಅನವರತ ನೆನೆಯುತಿರಬೇಕು
ಕರಗಳಲಿ ಹರಿಯ ಪೂಜಿಸುತಿರಲುಬೇಕು
ಚರಣಂಗಳಲಿ ಪುಣ್ಯಸ್ಥಳವ ಮೆಟ್ಟಲು ಬೇಕು
ಪುರಂದರ ವಿಠಲನ್ನ ನೆನೆಯುತಿರಬೇಕು || 5 ||

**Classification:** Keerthane
**Ankita:** purandara vittala
**Location:** NA
**Category:** Jeevanoddhara, Mukti Marga, Virakti
**Sub-Category:** koti, daari, janma, handi, samsara, patni, hendati, loka, koNa, goobe, hanuma, gaja, vairagya, virakti,
**Pravachana:** NA
**Explanation:** NA